ಅಲ್ಲಿಂದ ಕಾಲು ಕಿತ್ತ. ಜೈಲಿನ ಅನ್ನ ಉಣ್ಣುವ ಭಾಗ್ಯ ತನಗಿಲ್ಲವೆನ್ನುವುದು ಅವನಿಗೆ ಮನದಟ್ಟಾಗಿ ಅಳು ಒತ್ತರಿಸಿಕೊಂಡು ಬಂದಿತು.

ಸ್ವತಂತ್ರನಾಗಿ ಬದುಕುವುದೇ ತನ್ನ ಹಣೆಯಲ್ಲಿ ಬರೆದಿರಬೇಕು ಅಂತ ಅವನಿಗನ್ನಿಸಿತು. ಅವನು ತುಸು ಮುಂದೆ ಹೋದಾಗ ಮತ್ತಿಬ್ಬರು ಪೊಲೀಸರು ಅವನಿಗೆ ಎದುರಾದರು. ಸೋಫಿ ತನ್ನ ಹಿಂದಿನ ವರಸೆಯನ್ನೇ ಮುಂದುವರೆಸಿದ. ಪೊಲೀಸನ ಮುಂದೆ ಪಾನಮತ್ತನಾಗಿರುವವನಂತೆ ಯದ್ವಾ ತದ್ವಾ ಹೆಜ್ಜೆ ಹಾಕಿ ಕುಣಿಯತೊಡಗಿದ. ನರಿಯಂತೆ ಊಳಿಡಲಾರಂಭಿಸಿದ.

ಅವನನ್ನು ಕೆಲ ಹೊತ್ತು ಗಮನಿಸಿದ ಪೊಲೀಸನಿಗೆ ನಗು ತಡೆಯಲಾಗಲಿಲ್ಲ. ಅವನು ತನ್ನ ಸಂಗಾತಿಗೆ, "ಈ ಕಾಲೇಜ್ ಹುಡುಗರು ಇವತ್ತು ಎಂಥದ್ದೋ ಪಾರಿತೋಷಕ ಗೆದ್ದಿದ್ದಾರಂತೆ. ಅದಕ್ಕೇ ಹೀಗೆಲ್ಲಾ ಸಂಭ್ರಮಿಸುತ್ತಿದ್ದಾರೆ! ಅವರ ತಂಟೆಗೆ ಹೋಗಬೇಡಿ ಅಂತ ಬಾಸ್ ಮೊದಲೇ ಎಚ್ಚರಿಕೆ ಕೊಟ್ಟಿದ್ದಾರೆ. ಇವರ ಸಹವಾಸ ಬೇಡಪ್ಪ!" ಎಂದ.

ಇದನ್ನು ಕೇಳಿಸಿಕೊಂಡ ಸೋಫಿಯ ಉತ್ಸಾಹ ಜರ್ರನೆ ಕೆಳಗಿಳಿಯಿತು.

'ನನ್ನನ್ನು ಯಾವ ಪೊಲೀಸನೂ ಹಿಡಿಯುವಂತೆ ಕಾಣಿಸುತ್ತಿಲ್ಲ. ಇವತ್ತು ಜೈಲಿನ ಊಟ ಉಣ್ಣುವ ಭಾಗ್ಯ ನನಗೆ ಇಲ್ಲ!' ಅವನಿಗೆ ದುಃಖ ಉಮ್ಮಳಿಸಿ ಬಂತು. 'ನನ್ನ ಪಾಲಿಗೆ ಇವತ್ತಿನ ರಾತ್ರಿ ಪಾರ್ಕಿನ ಬೆಂಚೇ ಗತಿ!' ಮೈ ಕೊರೆಯುವ ಚಳಿಯ ರಾತ್ರಿಯನ್ನು ನೆನೆಸಿಕೊಂಡಾಗ ಅವನ ಮೈ ಅದುರತೊಡಗಿತು. ಏನು ಮಾಡುವುದೆಂದೇ ಅವನಿಗೆ ತೋಚಲಿಲ್ಲ.

ತನ್ನ ಹಣೆಬರಹವನ್ನು ನೆನೆದು ದುಃಖಿಸತೊಡಗಿದ್ದ ಅವನ ಮುಂದೆ ಲಕ್ಷಣವಾಗಿ ಕೋಟು ಬೂಟು ತೊಟ್ಟು, ಒಂದು ಕೈಯಲ್ಲಿ ಹೊಗೆಯಾಡುತ್ತಿದ್ದ ಸಿಗಾರು, ಮತ್ತೊಂದು ಕೈಯಲ್ಲಿ ಛತ್ರಿಯನ್ನು ತಿರುವುತ್ತಾ ಅಂಗಡಿಯೊಂದಕ್ಕೆ ಪ್ರವೇಶಿಸುತ್ತಿರುವ ಒಬ್ಬ ಮಧ್ಯವಯಸ್ಕ ಸೋಫಿಯ ಕಣ್ಣಿಗೆ ಕಾಣಿಸಿಕೊಂಡ. ಅವನನ್ನು ನೋಡುತ್ತಿದ್ದಂತೆಯೇ ಸೋಫಿಯ ತಲೆಯೊಳಗೆ ಮತ್ತೊಂದು ಆಲೋಚನೆ ಮೊಳೆಯಿತು. ಸೂಟು ಬೂಟಿನ ಗಣ್ಯ ವ್ಯಕ್ತಿ ಛತ್ರಿಯನ್ನು ಅಂಗಡಿಯ ಹೊರಗಿದ್ದ ಸ್ಟ್ಯಾಂಡಿಗೆ ಸಿಕ್ಕಿಸಿ ಒಳಗೆ ಹೋದ. ದೇವರು ನಿಜವಾಗಲೂ ಕರುಣಾಮಯಿ. ಹುಟ್ಟಿಸಿದವನು ಕೈ ಬಿಡುತ್ತಾನೆಯೇ?... ಎಂದುಕೊಳ್ಳುತ್ತಾ ಸೋಫಿ ಅಂಗಡಿಯನ್ನು ಸಮೀಪಿಸಿದ. ಸ್ಟ್ಯಾಂಡಿನಲ್ಲಿ ಸಿಲುಕಿಸಿದ್ದ ಛತ್ರಿಯನ್ನು ಎತ್ತಿಕೊಂಡು ಓಡತೊಡಗಿದ! ಅಷ್ಟರಲ್ಲಿ ಅಂಗಡಿಯೊಳಗಿಂದ ಓಡಿ ಬಂದ ಛತ್ರಿಯ ಯಜಮಾನ ಬೊಬ್ಬಿಡುತ್ತಾ ಸೋಫಿಯ ಹಿಂದೆ ಓಡಿಬರಲಾರಂಭಿಸಿದ! ಈಗೊಂದು ಕಾನೂನುಬಾಹಿರ ಸಂಗತಿಯೊಂದು ನಡೆದೇ ನಡೆಯುತ್ತದೆ ಎಂದು ಸೋಫಿ ಹರ್ಷಿತನಾದ. ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ.

"ನಿನ್ನ ಕೈಯಲ್ಲಿರುವ ಛತ್ರಿ ನನ್ನದು ಮಿಸ್ಟರ್..." ಗಣ್ಯವ್ಯಕ್ತಿ ಏದುಸಿರು ಬಿಡುತ್ತಾ ಹೇಳಿದ. ಅವನ ಮುಖ ಸಿಟ್ಟಿನಿಂದ ಕೆಂಪಗಾಗಿತ್ತು.

"ಹೌದೇನೂ?" ಸೋಫಿ ವ್ಯಂಗ್ಯದಿಂದ ಕೇಳಿದ.

"ಹೌದು ಕಣಯ್ಯ..."

"ಇದರ ಮೇಲೆ ನಿನ್ನ ಹೆಸರು ಬರೆದಿದೆ ಏನೂ?... ಅಗೋ... ಅಲ್ಲಿ ಪೊಲೀಸ್ ನಿಂತಿದ್ದಾನೆ. ಅವನಿಗೆ ದೂರು ಕೊಡು. ನಾನಿಲ್ಲೇ ಇರುತ್ತೇನೆ."

ಸೋಫಿ ಹೀಗೆ ಹೇಳುತ್ತಿದ್ದಂತೆ ಆ ಗಣ್ಯ ವ್ಯಕ್ತಿ ಕೊಂಚ ಅಧೀರನಾದಂತೆ ಕಂಡು ಬಂದ.

ಈಗ ಅವನ ದನಿಯಲ್ಲಿ ಸಿಟ್ಟಿರಲಿಲ್ಲ. "ನೋಡಪ್ಪ, ಅಲ್ಲಿವರೆಗೆ ಹೋಗುವ ಅಗತ್ಯವಿಲ್ಲ. ಈ ಛತ್ರಿಗಳೆಲ್ಲಾ ಒಂದೇ ತರ ಇರುವುದರಿಂದ ಯಾವುದು ಯಾರದು ಎಂದು ಹೇಗೆ ಹೇಳುವುದು? ನಾನೂ ಅಷ್ಟೇ. ಇದರ ಬಗ್ಗೆ ಅಷ್ಟೊಂದು ಗಮನ ಹರಿಸಲಿಲ್ಲ. ಕಾಫಿ ಕುಡಿಯೋಣ ಅಂತ 'ಆ'